ಪೂರೈಸುವ ಆ ನೊಂದಜೀವಕ್ಕೆ ನಿಮ್ಮನ್ನು ಕಂಡರೆ ಖುಷಿಯಾದೀತು. ನೀವು ಇಷ್ಟಪಡುವವರೆಗೂ ನಮ್ಮೊಂದಿಗೆ ಇರಿ. ಏನನ್ನೂ ಕೇಳುವುದಿಲ್ಲ, ಆಕೆ ನಿಮಗೆ. ಈ ಹಿಂದೆ ನಾನೊಬ್ಬ ಅಲೆಮಾರಿಯೆಂದೆನಲ್ಲವೆ? ಅಲೆಮಾರಿ ನಾನಲ್ಲ, ನನ್ನ ಮನಸ್ಸು. ಚಕ್ರಗಳಿರುವುದು ನನ್ನ ಕಾಲಿಗಲ್ಲ, ಅದರ ಕಾಲಿಗೆ.

ವಿಚಿತ್ರವೋ ಏನೋ? ನನಗೆಲ್ಲೂ ನೆಮ್ಮದಿಯೆನ್ನಿಸುವುದಿಲ್ಲ. ತೊಡಗಿಸಿ ಕೊಳ್ಳವುದಾಗುವುದಿಲ್ಲ. ತಟ್ಟನೆ ಬೇಸರ. ನಿರಾಸಕ್ತಿ ಏಕಾಂತತನ. ನಾನೇ ಒಂಟಿಯಾಗಿರಬೇಕೆಂದು ಬಯಸುತ್ತೇನೆ. ಆದರೆ ಅದೂ ಬೇಸರವಾಗಿ ಬಿಡುತ್ತದೆ. ನಾನು ಅನಾಥ, ಏಕಾಂಗಿ, ಅಲೆಮಾರಿ, ನೊಂದವನು. ದಯವಿಟ್ಟು, ದಯವಿಟ್ಟು ನನ್ನನ್ನು ಪ್ರೀತಿಸಿ ಎಂದು ಕಂಡಕಂಡವರಲ್ಲಿ ಗೋಗರೆಯಬೇಕೆನ್ನಿಸಿ ಪಿಚ್ಚೆನ್ನಿಸುತ್ತೆ. ಆಗೀಗ ಸಾಯುವ ಯೋಚನೆ ಬರುತ್ತದೆ. ಸಾಯಲು ಹೋಗಿಯೂ ಬಿಡುತ್ತೇನೆ – ಈಗ ಕುಳಿತಿದ್ದೆವಲ್ಲ ಆ ಗುಡ್ಡದ ಅಂಚು, ರೇಲ್ವೆ ನಿಲ್ದಾಣ, ಲಾರಿ, ಹಾಳುಬಾವಿ ಯಾವುದಾದರೂ ಸರಿ ಎಂದು. ಆದರೆ ಪ್ರತಿಸಲವೂ ಏನಾದರೊಂದು ಕಾರಣಕೊಟ್ಟುಕೊಂಡು ಮರಳುವುದರಲ್ಲಿ ಸುಖವೆನ್ನಿಸುತ್ತದೆ. ಮನೆಗೆ ಹೋಗಿ ನನಗಾಗಿ ಕಾಯುತ್ತಿರುವ ಅಮ್ಮನನ್ನು ತಬ್ಬಿ ಅಳುವುದರಲ್ಲಿ ನೆಮ್ಮದಿ ಸಿಕ್ಕುತ್ತದೆ. ಆದರೆ ನಿಮ್ಮನ್ನು ಕಂಡಾಗ ಅನ್ನಿಸಿದ್ದೆ ಬೇರೆ. ಕ್ಷಮಿಸಿಬಿಡು, ನಿಮಗಾಗಿ ಬದುಕುಬೇಕೆನಿಸಿತು. ಹೇಳಿ, ನಾನಂದದ್ದರಲ್ಲಿ ಏನಾದರೂ ತಪ್ಪಿದೆಯೆ? ಇಷ್ಟು ದಿನ ನಿಮ್ಮ ಬರುವಿಕೆಯ ಕಾದು ಈ ಜೀವ ಹಿಡಿದುಕೊಂಡಿದ್ದೆ ಎನ್ನಿಸಿದರೆ ಅದು ನನ್ನ ತಪ್ಪೆ? ಹೇಗೆ? ಅದು ನಿಜವಾದರೆ ಯಾಕೆ? ನೀವು ಇಂಥದ್ದೇ ಪಾತ್ರಗಳ ಕಥೆ ಬರೆದಿದ್ದೀರಲ್ಲ ಹೇಳಿ.

★★★

ಚೈತ್ರ, ಸುನಯನ ಅರ್ಧಫರ್ಲಾಂಗು ನಡೆದು ಬಳಸುದಾರಿಯಲ್ಲಿ ಆ ಪುಟ್ಟ ಮನೆಯ ಮುಂದೆ ಬಂದು ನಿಂತರು. ಕುಂಕುಮದ ಆಕಾಶ ಮೆಲ್ಲಗೆ ಕಪ್ಪಾಗತೊಡಗಿತ್ತು. ಚೈತ್ರ ಬಹಳ ಹುರುಪಿನಲ್ಲಿ ಮನೆಯ ಕಟ್ಟಿಗೆಯ ಗೇಟನ್ನು ಸರಿಸಿ ಸುನಯನಳನ್ನು ಒಳಗೆ ಬರುವಂತೆ ಕರೆದ. ಆ ಮನೆಯ ಮುಂದೆ ಚಿಕ್ಕದೊಂದು ಕೈತೋಟವಿತ್ತು. ಅತಿ ಚಿಕ್ಕ ಜಾಗವನ್ನೇ ಸಪಾಟು ಮಾಡಿ ಬಗೆ ಬಗೆಯ ಹೂ – ಹಣ್ಣು ಬೆಳೆಸಿದ್ದರು. ಚೈತ್ರ ಇದೆಲ್ಲ ಅಮ್ಮನದೇ ಕೆಲಸ. ಮನೆಯಲ್ಲಿ ಒಬ್ಬಳೇ ಇರುತ್ತಾಳೆ ನೋಡಿ – ಎಂದ. ತುಸುಹೊತ್ತು ಹೂಗಳನ್ನೇ ನೋಡುತ್ತ ನಿಂತ ಸುನಯನ – ಹೂಗಳಿಲ್ಲದ, ಗಿಡಗಳಿಲ್ಲದ ಮನೆ ಅದೆಂಥದ್ದು – ಎಂದ ಅಪ್ಪನ ಮಾತನ್ನು ನೆನಪಿಸಿಕೊಂಡಳು. ತಮ್ಮ ಹಿತ್ತಲಿನ, ಅಂಗಳದ ಮರಗಿಡಗಳನ್ನು ನೆನಪಿಗೆ ತಂದುಕೊಂಡಳು. ಅಷ್ಟರಲ್ಲಿ ಒಳಗಿನಿಂದ ಮುದುಕಿಯೊಬ್ಬಳು ಬಾಗಿಲ ಪಡಕು ಸರಿಸಿ ಹೊರಬಂದಳು. ಚೈತ್ರನನ್ನು ನೋಡಿ ಎಂದಿನ ನಗು ಎನ್ನುವಂತೆ ಬಾಯಿ ತುಂಬ ನಕ್ಕಳು.

ಚೈತ್ರ – ಅಮ್ಮ ಇವರು ಸುನಯನ, ಕಥೆ ಬರೀತಾರೆ. ಕೆಲವು ದಿನ ಇಲ್ಲೇ ಇರ್‍ತಾರೆ! ಎಂದು ಪರಿಚಯಿಸಿದ. ಮುದುಕಿ ಸುನಯನಳತ್ತ ತಿರುಗಿ ಮತ್ತೊಂದು ತುಂಬುನಗು ಚೆಲ್ಲಿದಳು. ಕೈಮುಟ್ಟಿ ಆತ್ಮೀಯತೆ ತೋರಿದಳು. ಒಳಗೆ ಬನ್ನಿ ಎನ್ನುವಂತೆ ಕಣ್ಣಲ್ಲೇ ಕರೆದು ಒಳ ನಡೆದಳು. ಚೈತ್ರ ಎಲ್ಲ ಅಮ್ಮನ ತದ್ರೂಪು–ಮುಖ. ಮೂಗು, ಬಿಕ್ಕಣ್ಣು, ನಡೆಯುವ ಶೈಲಿ ಎಲ್ಲ ಎಲ್ಲ ಎಂದುಕೊಂಡಳು. ಅಮ್ಮ ಮಾಡಿಕೊಟ್ಟ ಚಹಾ ಕುಡಿದಳು. ತುಸುಹೊತ್ತು ಮೂವರು ಸುಮ್ಮನೆ ಕುಳಿತರು. ಸುನಯನ ಮೌನ ಮುರಿಯುವವಳಂತೆ ಅಲ್ಲಿಂದೆದ್ದು ಅಂಗಳದ ಹೂಗಿಡ, ಬಳ್ಳಿಗಳನ್ನು ಮುಟ್ಟುತ್ತ ತಿರುಗತೊಡಗಿದಳು...